# ಗುಜರಿ ಕಲೆ

ಚಿತ್ರ – ಬರಹ:
ಎ.ಎಸ್. ಹೂಲಗೇರಿ ಹುನಗುಂದ







ಬಾಗಲಕೋಟೆ ಜಿಲ್ಲೆಯ ಇಲಕಲ್ಲಿನ ಬಸವರಾಜ ಒಬ್ಬ ಕಲಾ ಶಿಕ್ಷಕ. ತಮ್ಮ ಬಿಡುವಿನ ವೇಳೆಯಲ್ಲಿ ದ್ವಿಚಕ್ರ ವಾಹನಗಳ ಬಿಡಿಭಾಗಗಳನ್ನು ಬಳಸಿ ಕಲಾಕೃತಿಗಳನ್ನು ರಚಿಸುತ್ತಾರೆ.

ಗುಜರಿ ಅಂಗಡಿಗಳಿಗೆ ಅಲೆದು ವಾಹನಗಳ ಬಿಡಿ ಭಾಗಗಳನ್ನು ಸಂಗ್ರಹಿಸುವುದು ಇವರ ಆಸಕ್ತಿಗಳಲ್ಲೊಂದು. ಎಂ–80 ಚೆಸ್ಸಿ, ಬಜಾಜ್ ಸ್ಕೂಟರ್ ಚೇಸರ್, ಸೈಲೆನ್ಸರ್ ಪೈಪ್, ಪೆಟ್ರೋಲ್ ಟ್ಯಾಂಕ್, ಕ್ಲಚ್ ಪ್ಲೇಟ್, ಬ್ರೇಕ್‌ಸೆಟ್, ಬಾಡಿಶೀಟ್, ಮಡ್ಗಾರ್ಡ್, ಸ್ಪ್ರಿಂಗ್ ಮುಂತಾದ ಬಿಡಿ ಭಾಗಗಳನ್ನು ಕಂಡರೆ ಸಾಕು ಅವನ್ನು ಸಂಗ್ರಹಿಸಲು ಯತ್ನಿಸುತ್ತಾರೆ.

ಹೀಗೆ ಖರೀದಿಸಿ ತಂದ ಬಿಡಿ ಭಾಗಗಳನ್ನು ಕಲಾತ್ಮಕ ವಿನ್ಯಾಸಕ್ಕೊಳಪಡಿಸಿ ಕಲಾಕೃತಿಗಳನ್ನಾಗಿಸುತ್ತಾರೆ. ಈ ಗುಜರಿ ಕಲಾಕೃತಿಗಳನ್ನು ಪ್ರತ್ಯಕ್ಷ ನಿಂತು ನೋಡಿದರೆ ಕುತೂಹಲ ಗರಿಕೆದರುತ್ತದೆ. ಬೆದರಿನಿಂತ ನವಿಲು, ದೃಷ್ಟಿ ಯುದ್ಧದಲ್ಲಿ ನಿರತವಾದ ಜಿಂಕೆಗಳು, ಜಾಹೀರಾತಿನ ಸುಂದರಿಯಂತೆ ನಿಂತ ಕೊಕ್ಕರೆ, ದುರಗುಟ್ಟಿ ನೋಡುತ್ತಿರುವ ಜಿರಲೆ, ನಡೆದು ಸುಸ್ತಾಗಿ ನಿಂತ ಒಂಟೆ– ಹೀಗೆ ವಿಭಿನ್ನ ಮಾದರಿಯ ಕಲಾಕೃತಿಗಳು ಇವರ ಗ್ಯಾರೇಜಿನಲ್ಲಿ ಅರಳಿ ನಿಂತಿವೆ.

ಕಲಾಸಕ್ತರು ಒಳ್ಳೆಯ ಬೆಲೆಗೆ ಕಲಾಕೃತಿಗಳನ್ನು ಖರೀದಿಸುವುದೂ ಉಂಟು.

ಬಸವರಾಜ ಒಂದೇ ಬಗೆಯ ಕಲಾಕೃತಿಗಳನ್ನು ರೂಪಿಸುವುದಿಲ್ಲ. ಒಮ್ಮೆ ಮಾಡಿದ ಮಾದರಿಯನ್ನು ಮತ್ತೆ ಮಾಡುವುದಿಲ್ಲ. ಇವರ ಈ ಕಲಾಸಕ್ತಿಗೆ ಬೆನ್ನೆಲುಬಾಗಿ ನಿಂತವರು ತಾಯಿ ಅನಸೂಯ ಮತ್ತು ಸ್ನೇಹಿತ ಶರಣು ನೀಲಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಂಚಾಲಕರಾಗಿ ನಿವೃತ್ತಿಯಾದ ಅನಸೂಯ ಬಿಜ್ಜಳ ಅವರು ಮಗನ ಕಲೆಗೆ ಪ್ರೋತ್ಸಾಹ ಮತ್ತು ತಗಲುವ ಎಲ್ಲಾ ವೆಚ್ಚವನ್ನು ನೀಡುತ್ತಾ ಬಂದಿದ್ದಾರೆ. ಆತ್ಮೀಯ ಸ್ನೇಹಿತ ಶರಣು ಬಿಡಿ ಭಾಗಗಳ ಸಂಗ್ರಹಣೆಗಾಗಿ ಅಲೆದಾಡುತ್ತಾರೆ. ಪ್ರವಾಸಿ ತಾಣಗಳು ಮತ್ತು ಪಾರ್ಕ್‌ಗಳಲ್ಲಿ ವಿಭಿನ್ನ, ವಿಶೇಷ ಎನಿಸುವ ಗುಜರಿ ಕಲಾಕೃತಿಗಳನ್ನು ನಿರ್ಮಿಸಬೇಕೆಂಬುದು ಬಸವರಾಜರ ಮಹದಾಸೆ. (ಸಂಪರ್ಕಕ್ಕಾಗಿ: 9980178013).